ಧಾರವಾಡ ಜಿಲ್ಲೆಯಲ್ಲಿ ತಾಲ್ಲೂಕುವಾರು ಅನುದಾನಿತ ಪ್ರೌಢಶಾಲೆಗಳು ಹಾಗೂ ಪ್ರಾಥಮಿಕ ಶಾಲೆಗಳ ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಪ್ರೌಢಶಾಲೆಗಳು			ಪ್ರಾಥಮಿಕ ಶಾಲೆಗಳು		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1.	ನವಲಗುಂದ	09	02	11	04	-	04
2.	ಕಲಘಟಗಿ	07	-	07	02	-	02
3.	ಧಾರವಾಡ (ಗ್ರಾ)	10	02	12	07	-	07
4.	ಕುಂದಗೋಳ	06	02	08	04	-	04
5.	ಹುಬ್ಬಳ್ಳಿ (ಗ್ರಾ)	08	-	08	02	-	02
6.	ಧಾರವಾಡ ಶಹರ	13	07	20	21	02	23
7.	ಹುಬ್ಬಳ್ಳಿ ನಗರ	21	13	34	19	04	-
	ಒಟ್ಟು	**74**	**26**	**100**	**57**	**06**	**63**

ಧಾರವಾಡ ಜಿಲ್ಲೆಯಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳ ತಾಲ್ಲೂಕು ಪಟ್ಟಿ

ಕ್ರ.ಸಂ.	ತಾಲ್ಲೂಕು	ಬಾಲಕರು	ಬಾಲಕಿಯರು	ಸಹಶಿಕ್ಷಣ	ಒಟ್ಟು
1.	ಧಾರವಾಡ	05	06	156	167
2.	ಹುಬ್ಬಳ್ಳಿ	12	10	087	109
3.	ಹುಬ್ಬಳ್ಳಿ	22	20	076	118
4.	ಕಲಘಟಗಿ	02	05	106	113
5.	ಕುಂದಗೋಳ	03	16	082	101
6	ನವಲಗುಂದ	07	09	086	102
	ಒಟ್ಟು	**51**	**66**	**593**	**710**

ಕಪ್ಪು ಹಲಗೆ ಯೋಜನೆ

45 - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕಪ್ಪು ಹಲಗೆ ಯೋಜನೆಯನ್ನು ಶಾಲೆಗಳಲ್ಲಿ ಎಂದಿನಿಂದ ಜಾರಿಗೆ ತರಲಾಯಿತು?

ಅ) ಈ ಯೋಜನೆಗಾಗಿ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆಯಿಂದ ಶಾಲೆಗಳಿಗೆ ಆಗಿರುವ ಪ್ರಮುಖ ಉಪಯೋಗಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1987-88 ರಿಂದ ಜಾರಿಗೆ ತರಲಾಯಿತು.

ಆ) ರೂ. ಲಕ್ಷಗಳಲ್ಲಿ

ಉದ್ದೇಶ	ಬಿಡುಗಡೆ ಮಾಡಿದ ಹಣ	ಖರ್ಚು ಮಾಡಿದ ಹಣ
1. ಶಾಲಾ ಕೊಠಡಿ ನಿರ್ಮಾಣ	8858.41	8812.32
2. ಶಿಕ್ಷಕರ ವೇತನ: (ವಿಸ್ತೃತ ಹಂತದಲ್ಲಿ) ರೂ.	11996.75 1446.14	10550.61 16.3.2000 ದಲ್ಲಿ ಮಂಜೂರಾಗಿದೆ.
3. ಕಲಿಕಾ ಬೋಧನಾ ಸಾಮಗ್ರಿ ಮತ್ತು ಪೀಠೋಪಕರಣ ಒದಗಿಸುವುದು	9223.02	6554.90

ವಿಸ್ತೃತ 3ನೇ ಹಂತದಲ್ಲಿ ಸಾಮಗ್ರಿ ಸರಬರಾಜು ಪ್ರಗತಿಯಲ್ಲಿರುತ್ತದೆ. 4ನೇ ಹಂತಕ್ಕೆ ಹಣ ಬಿಡುಗಡೆಯಾಗಿದ್ದು ಸಾಮಗ್ರಿ ಆಯ್ಕೆ ಪ್ರಕ್ರಿಯೆ ಇನ್ನೂ ಪ್ರಾರಂಭಿಸಿಲ್ಲ.

ಇ) ***ಶಿಕ್ಷಕರ ಹುದ್ದೆ :***

1. 14350 ಏಕೋಪಾಧ್ಯಾಯ ಕಿರಿಯ ಪ್ರಾಥಮಿಕ ಶಾಲೆಗಳಿಗೆ 2ನೇ ಶಿಕ್ಷಕರ ಹುದ್ದೆ ಮಂಜೂರು ಮಾಡಲಾಗಿದೆ.
2. 100ಕ್ಕಿಂತ ಹೆಚ್ಚು ದಾಖಲಾತಿ ಇರುವ 3855 ಕಿರಿಯ ಪ್ರಾಥಮಿಕ ಶಾಲೆಗಳಿಗೆ 3ನೇ ಶಿಕ್ಷಕರ ಹುದ್ದೆ ಮಂಜೂರು ಮಾಡಲಾಗಿದೆ.
3. 18916 ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಲಾ ಒಂದೊಂದು ಹೆಚ್ಚುವರಿ ಶಿಕ್ಷಕರ ಹುದ್ದೆ ಮಂಜೂರು ಮಾಡಲಾಗಿದೆ.

2. ಕಲಿಕಾ ಬೋಧನಾ ಸಾಮಗ್ರಿ :

1. 22281 ಕಿರಿಯ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನ ಉಪಕರಣಗಳ ಕಿಟ್, ಪೀಠೋಪಕರಣ ಮತ್ತು ಅಲ್ಮೆರಾ ಒದಗಿಸಲಾಗಿದೆ.
2. 18916 ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಲಾ ರೂ. 40000ದಂತೆ ಕಲಿಕಾ ಬೋಧನಾ ಸಾಮಗ್ರಿ ಹಾಗೂ ಪೀಠೋಪಕರಣ ಒದಗಿಸಲಾಗಿದೆ.

3. ಶಾಲಾ ಕೊಠಡಿ ನಿರ್ಮಾಣ :

25530 ಶಾಲಾ ಕೊಠಡಿಗಳ ನಿರ್ಮಾಣ ಕೈಗೊಂಡು 20718 ಪೂರ್ಣಗೊಳಿಸಲಾಗಿದೆ. 4812 ಕೊಠಡಿಗಳ ನಿರ್ಮಾಣ ಪ್ರಗತಿಯಲ್ಲಿ ಇರುತ್ತದೆ.

ದಿನಾಂಕ ೨೨.೩.೨೦೦೦ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಗೌರವ ಶಿಕ್ಷಕರನ್ನು ಖಾಯಂಗೊಳಿಸುವುದು

265 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಸೇವೆ ಸಲ್ಲಿಸುತ್ತಿರುವ ಎಷ್ಟು ಗೌರವ ಶಿಕ್ಷಕರಿದ್ದಾರೆ?

ಆ) ಅವರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

	ಪ್ರಾಥಮಿಕ	ಪ್ರೌಢ
ಪರಿಶಿಷ್ಟ ಜಾತಿ	10	-
ಪರಿಶಿಷ್ಟ ಪಂಗಡ	002	-
ಇತರೆ	003	-

ಆ) ನೇರ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಗೌರವ ಶಿಕ್ಷಕರಿಗೆ, ಸೇವಾ ಕೃಪಾಂಕ ನೀಡಲು ನೇಮಕಾತಿ ನಿಯಮಗಳಲ್ಲಿ ಅವಕಾಶ ಮಾಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆಟ್ಟಿರುವ ಬೋರ್‌ವೆಲ್‌ಗಳ ದುರಸ್ಥಿ

266 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೊರೆಯಿಸಲಾದ ಒಟ್ಟು ಕೊಳವೆಬಾವಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಅವುಗಳ ಪೈಕಿ ಕೆಟ್ಟ ಕೊಳವೆಬಾವಿಗಳ ಸಂಖ್ಯೆ ಎಷ್ಟು?

ಇ) ಇದರಿಂದ ಜನಗಳಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?